## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಿಂದ ನಿರ್ಮಾಣ ಮಾಡಲಾಗಿರುವ ನಾರಾಯಣಪೂರ ಬಲದಂಡೆ ಮುಖ್ಯ ಕಾಲುವೆಯ ಕಿ.ಮೀ.0.00 ರಿಂದ 95.00 ರವರೆಗಿನ ಆಧುನೀಕರಣ ಪ್ಯಾಕೇಜ್ ಕಾಮಗಾರಿಗೆ ಹಾಗೂ ಸದರಿ ಮುಖ್ಯ ಕಾಲುವೆಗೆ ಅಡ್ಡಲಾಗಿ ನಿರ್ಮಿಸಲಾಗಿರುವ 1 ರಿಂದ 18 ರವರೆಗಿನ ಉಪ/ಸೀಳು ಕಾಲುವೆಯ ಆಧುನೀಕರಣ ಪ್ಯಾಕೇಜ್ ಕಾಮಗಾರಿಗೆ ಸಂಬಂಧಿಸಿದಂತೆ, ಮಂಜೂರಾದ ಅಂದಾಜು ಪತ್ರಿಕೆಗಳಲ್ಲಿ ಕಂಡುಬಂದ ಲೋಪದೋಷಗಳನ್ನು ಪ್ರಮಾಣಿಕರಿಸುವ ಸಲುವಾಗಿ ತಾಂತ್ರಿಕ ತಜ್ಞರ ಸಮಿತಿ ರಚಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಪತ್ರ ಸಂ.ಜಸಂಇ 281 ಕೆಬಿಎನ್ 2018 ದಿ:11.05.2022.
2. ಕಾರ್ಯದರ್ಶಿ, ವಿಧಾನ ಸಭೆ ಸಚಿವಾಲಯ ರವರ ಅ.ಸ.ಪ. ಸಂ.ಕವಿಸಸ/ಅಂಸ/05/ಜಸಂಇಪವ್ಯ/2021-22 ದಿ:21.05.2022.
3. ತಮ್ಮ ಕಛೇರಿ ಪತ್ರ ಕೃಭಾಜನಿ/ವ್ಯನಿ/ತಾ.ಶಾ.4/ಅಂ.ಸ/2022-23/529a ದಿನಾಂಕ:13.05.2022.

***

**ಪ್ರಸ್ತಾವನೆ:**

1. ಕರ್ನಾಟಕ ವಿಧಾನ ಸಭೆಯ ಅಂದಾಜುಗಳ ಸಮಿತಿಯು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ವತಿಯಿಂದ ನಿರ್ಮಾಣ ಮಾಡಲಾಗಿರುವ ನಾರಾಯಣಪೂರ ಬಲದಂಡೆ ಮುಖ್ಯ ಕಾಲುವೆ ಕಿ.ಮೀ.0.00 ರಿಂದ 95.00 ವರೆಗಿನ ಹಾಗೂ ಮುಖ್ಯ ಕಾಲುವೆಗೆ ಅಡ್ಡಲಾಗಿ ನಿರ್ಮಿಸಿರುವ 1 ರಿಂದ 15 ರವರೆಗಿನ ವಿತರಣಾ / ಸೀಳು ಕಾಲುವೆಗಳ ರಚನೆ, ವಿಸ್ತರಣೆ, ನವೀಕರಣ, ಆಧುನೀಕರಣ ಕಾಮಗಾರಿಗಳನ್ನು ದಿನಾಂಕ:04.05.2022 ರಿಂದ 06.05.2022 ರವರೆಗೆ ರಾಯಚೂರ ಜಿಲ್ಲೆಗೆ ಭೇಟಿ ನೀಡಿ ಪರಿಶೀಲಿಸಿದ ಸಂದರ್ಭದಲ್ಲಿ, ಯೋಜನೆಯ ಕಾಮಗಾರಿ, ದರಪಟ್ಟಿ ಸಿದ್ದಪಡಿಸಿರುವುದು, ಮಾಪನ ಪುಸ್ತಕಗಳನ್ನು ಬರೆದಿರುವುದು, ಮುರಮ್ ಸಾಗಾಣಿಕೆ, ಏರಿ ನಿರ್ಮಾಣ ಮುಂತಾದವುಗಳು ಕುರಿತಂತೆ ಹಲವು ಲೋಪದೋಷಗಳಿಂದ ಕೂಡಿರುವುದನ್ನು ಸಮಿತಿಯು ಗಮನಿಸಿ, ಇದರಿಂದ ಸರ್ಕಾರದ ಬೊಕ್ಕಸಕ್ಕೆ ಅಪಾರ ಪ್ರಮಾಣದ ನಷ್ಟ ಉಂಟು ಮಾಡಲಾಗಿರುತ್ತದೆಂದು ಸಮಿತಿಯು ಅಭಿಪ್ರಾಯ ಪಟ್ಟಿರುತ್ತದೆ.

2. ಮೇಲೆ ಓದಲಾದ (1) ರ ಸರ್ಕಾರದ ಪತ್ರದಲ್ಲಿ, ದಿನಾಂಕ:11.05.2022 ರಂದು ಜರುಗಿದ ಕರ್ನಾಟಕ ವಿಧಾನ ಸಭೆಯ ಅಂದಾಜು ಸಮಿತಿ ಸಭೆಯಲ್ಲಿ ಸಮಿತಿಯು ವಿಸ್ತೃತವಾಗಿ ಚರ್ಚಿಸಿ ನೀಡಿರುವ ನಿರ್ದೇಶನದಂತೆ ಕೂಡಲೇ ಕ್ರಮ ವಹಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರವರನ್ನು ಕೋರಲಾಗಿತ್ತು.

3. ಮೇಲೆ ಓದಲಾದ (2) ರ ಪತ್ರದಲ್ಲಿ, ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆ, ವಿತರಣಾ ಕಾಲುವೆ ಮತ್ತು ಸೀಳು ಕಾಲುವೆಗಳ ERM ಕಾಮಗಾರಿ, ಕಾಮಗಾರಿಗಳ ಭೌತಿಕ ಪ್ರಗತಿ ಮತ್ತು ದರಪಟ್ಟಿಗಳನ್ನು ಪರಿಶೀಲಿಸಲು ರಚಿಸಲಾಗಿದ್ದ ಅಂದಾಜು ಪರಿಶೀಲನಾ ಸಮಿತಿಯು ನೀಡಿರುವ ವರದಿಯಲ್ಲಿನ ಅಭಿಪ್ರಾಯ ಮತ್ತು ವಿಚಾರಣಾ ಫಲಗಳನ್ನು ಪರಿಮಾಣಿಸಿ (Quantify) ಸಮರ್ಪಕವಾದ ವರದಿಯನ್ನು ಮತ್ತು 0-95 ಕಿ.ಮೀ.ವರೆಗೆ ಪ್ರತ್ಯೇಕವಾಗಿ ಸಿದ್ದಪಡಿಸಲಾಗಿರುವ ದರಪಟ್ಟಿಗಳನ್ನು ನೀಡುವುದು ಹಾಗೂ ದಿನಾಂಕ:11.05.2022 ರಂದು ನಡೆದ ಸಭೆಯಲ್ಲಿ ಸಮಿತಿಯು ನೀಡಿದ ನಿರ್ದೇಶನದಂತೆ ಕ್ರಮಗಳನ್ನು ಅಗತ್ಯ ಕೈಗೊಂಡು ಮಾಹಿತಿಯನ್ನು ಸಚಿವಾಲಯಕ್ಕೆ ನೀಡುವಂತೆ, ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ ರವರ ಪತ್ರದಲ್ಲಿ ಕೋರಲಾಗಿರುತ್ತದೆ.

....2)

ಮೇಲೆ ಓದಲಾದ (3) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರವರು ಈ ಕೆಳಗಿನಂತೆ ವರದಿ / ಪ್ರಸ್ತಾವನೆಯನ್ನು ತಮ್ಮ ಅಭಿಪ್ರಾಯದೊಂದಿಗೆ ಸಲ್ಲಿಸಿರುತ್ತಾರೆ.

ರಾಯಚೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಯ ಕಿ.ಮೀ..0.00 ದಿಂದ 95.00 ರವರೆಗಿನ ಆಧುನೀಕರಣ ಪ್ಯಾಕೇಜ್ ಕಾಮಗಾರಿಗೆ ಹಾಗೂ ಸದರಿ ಮುಖ್ಯ ಕಾಲುವೆಗೆ ಅಡ್ಡಲಾಗಿ ನಿರ್ಮಿಸಲಾಗಿರುವ 1 ರಿಂದ 18 ರವರೆಗಿನ ಉಪ / ಸೀಳು ಕಾಲುವೆಯ ಆಧುನೀಕರಣ ಪ್ಯಾಕೇಜ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಂಜೂರಾದ ಅಂದಾಜು ಪತ್ರಿಕೆಗಳಲ್ಲಿ ಅಳವಡಿಸಿಕೊಂಡಿರುವ ಕೆಲವೊಂದು ಐಟಂಗಳಲ್ಲಿನ ಅವಶ್ಯಕತೆ ಹಾಗೂ ನಿಗಮದ ಅಂದಾಜು ಪರಿಶೀಲನಾ ಸಮಿತಿಯ ಶಿಫಾರಸ್ಸಿನಲ್ಲಿ ಕಂಡುಬಂದಂತಹ ತಾಂತ್ರಿಕ ನ್ಯೂನತೆಗಳನ್ನು ಪರಿಮಾಣಿಸಿ (Quantify) ವರದಿಯನ್ನು ಸಿದ್ಧಪಡಿಸಲು ತಾಂತ್ರಿಕ ಸಮಿತಿಯ ಅತ್ಯಾವಶ್ಯಕವಾಗಿರುತ್ತದೆ ಎಂದು ಅಭಿಪ್ರಾಯ ಪಡುತ್ತಾ, ಈ ಕೆಳಗಿನಂತೆ ತಾಂತ್ರಿಕ ತಜ್ಞರ ಸಮಿತಿಯನ್ನು ರಚಿಸಬಹುದಾಗಿದ್ದು, ಈ ನಿಟ್ಟಿನಲ್ಲಿ ಸರ್ಕಾರದ ಅನುಮೋದನೆ ಕೋರಿದೆ.

| ಕ್ರಮ ಸಂ. | ಅಧ್ಯಕ್ಷರು / ಸದಸ್ಯರು / ವಿಶೇಷ ಆಹ್ವಾನಿತರು | |
|---|---|---|
| 1 | ಶ್ರೀ ಸಿದ್ದಗಂಗಪ್ಪ ಎಸ್. ಬಿ., ನಿವೃತ್ತ ಸರ್ಕಾರದ ಕಾರ್ಯದರ್ಶಿಗಳು, ಬೆಂಗಳೂರು | ಅಧ್ಯಕ್ಷರು |
| 2 | ಶ್ರೀ ಎಂ. ಜಿ. ಶಿವಕುಮಾರ್, ನಿವೃತ್ತ ಮುಖ್ಯ ಇಂಜಿನೀಯರ್, ಬೆಂಗಳೂರು | ಸದಸ್ಯರು |
| 3 | ಶ್ರೀ ಚೆಲುವರಾಜು, ನಿವೃತ್ತ ಮುಖ್ಯ ಇಂಜಿನೀಯರ್, ಬೆಂಗಳೂರು | ಸದಸ್ಯರು |

ಮುಂದುವರೆದು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ವತಿಯಿಂದ ನಿರ್ಮಾಣ ಮಾಡಲಾಗಿರುವ 0.00 ಕಿ.ಮೀ. ರಿಂದ 95.00 ಕಿ.ಮೀ.ವರೆಗಿನ ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆ ಹಾಗೂ ಮುಖ್ಯ ಕಾಲುವೆಗೆ ಅಡ್ಡಲಾಗಿ ನಿರ್ಮಿಸಿರುವ ವಿತರಣಾ ಕಾಲುವೆ 1 ರಿಂ 15 ರವರೆಗಿನ ಆಧುನೀಕರಣ ಪ್ಯಾಕೇಜ್-1 ಮತ್ತು ವಿತರಣಾ ಕಾಲುವೆ 16 ರಿಂದ 18 ರವರೆಗಿನ ಆಧುನೀಕರಣ ಪ್ಯಾಕೇಜ್-2 ಉಪ / ಸೀಳು ಕಾಲುವೆಗಳ ರಚನೆ; ವಿಸ್ತರಣೆ; ನವೀಕರಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಂದಾಜು ಪರಿಶೀಲನಾ ಸಮಿತಿಯು ನೀಡಿರುವ ವರದಿಯಲ್ಲಿನ ಅಭಿಪ್ರಾಯ ಮತ್ತು ವಿಚಾರಣಾ ಫಲಗಳನ್ನು ಪರಿಮಾಣಿಸಿ (Quantify) ಸಮರ್ಪಕವಾದ ವರದಿಯನ್ನು ಸಿದ್ಧಪಡಿಸಲು ಅಗಾಧ ತಾಂತ್ರಿಕ ಮಾಹಿತಿಗಳನ್ನು ಮತ್ತು ದಾಖಲೆಗಳನ್ನು ಕಲೆ ಹಾಕಿ ಸಿದ್ಧಪಡಿಸಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ಒಟ್ಟು 3 ಪ್ಯಾಕೇಜ್ ಕಾಮಗಾರಿಗಳ ಪೈಕಿ ಪ್ಯಾಕೇಜ್‌ವಾರು ಹಂತ ಹಂತವಾಗಿ ಪರಿಮಾಣಿಸಿ (Quantify) ಸಮರ್ಪಕವಾದ ವರದಿಯನ್ನು ಸಲ್ಲಿಸಲು ರಚಿಸಲ್ಪಡುವ ತಜ್ಞರ ಸಮಿತಿಗೆ ಸುಮಾರು 3 ತಿಂಗಳ ಸೂಕ್ತ ಕಾಲಾವಕಾಶ ಅವಶ್ಯಕತೆ ಇರುತ್ತದೆ ಎಂದು ಅಭಿಪ್ರಾಯ ಪಡಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 281 ಕೆಬಿಎನ್ 2018 (ಭಾ), ಬೆಂಗಳೂರು, ದಿನಾಂಕ:10.06.2022**

1. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಯಚೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಯ ಕಿ.ಮೀ.0.00 ದಿಂದ 95.00 ರವರೆಗಿನ ಆಧುನೀಕರಣ ಪ್ಯಾಕೇಜ್ ಕಾಮಗಾರಿ ಹಾಗೂ ಸದರಿ ಮುಖ್ಯ ಕಾಲುವೆಗೆ ಅಡ್ಡಲಾಗಿ ನಿರ್ಮಿಸಲಾಗಿರುವ ವಿತರಣಾ ಕಾಲುವೆ ಸಂಖ್ಯೆ:1 ರಿಂದ 18 ರವರೆಗಿನ ಉಪ / ಸೀಳು ಕಾಲುವೆಯ ಆಧುನೀಕರಣ ಪ್ಯಾಕೇಜ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಂಜೂರಾದ ಅಂದಾಜು ಪತ್ರಿಕೆಗಳಲ್ಲಿ ಅಳವಡಿಸಿಕೊಂಡಿರುವ ಐಟಂಗಳಲ್ಲಿನ ಅವಶ್ಯಕತೆ ಹಾಗೂ ಸದರಿ ಅಂದಾಜು ಪತ್ರಿಕೆಗಳನ್ನು ಪರಿಶೀಲಿಸಿ ಪ್ರಸಕ್ತ

.....3)

ನಿಗಮದ ಅಂದಾಜು ಪರಿಶೀಲನಾ ಸಮಿತಿಯು ಗಮನಿಸಿರುವ ತಾಂತ್ರಿಕ ನ್ಯೂನತೆಗಳನ್ನು ಪರಿಗಣಿಸಿ, ಪರಿಮಾಣಿಸಿ (Quantify) ಸೂಕ್ತ ಶಿಫಾರಸ್ಸಿನೊಂದಿಗೆ ವರದಿಯನ್ನು ಸಲ್ಲಿಸಲು ಈ ಕೆಳಗಿನಂತೆ ತಾಂತ್ರಿಕ ತಜ್ಞರ ಸಮಿತಿಯನ್ನು ರಚಿಸಲಾಗಿದೆ ;

| ಕ್ರ. ಸಂ. | ಅಧ್ಯಕ್ಷರು / ಸದಸ್ಯರು | |
|---|---|---|
| 1 | ಶ್ರೀ. ಸಿದ್ದಗಂಗಪ್ಪ, ಎಸ್.ಬಿ., ನಿವೃತ್ತ ಸರ್ಕಾರದ ಕಾರ್ಯದರ್ಶಿ ಹಾಗೂ ಅಧ್ಯಕ್ಷರು, ತಾಂತ್ರಿಕ ಉಪ ಸಮಿತಿ, ಕೃ.ಭಾ.ಜ.ನಿ., ಬೆಂಗಳೂರು. | ಅಧ್ಯಕ್ಷರು |
| 2 | ಶ್ರೀ. ಎಂ.ಜಿ. ಶಿವಕುಮಾರ, ನಿವೃತ್ತ ಮುಖ್ಯ ಇಂಜಿನೀಯರ್ ಹಾಗೂ ವಿಶೇಷ ಆಹ್ವಾನಿತರು, ಅಂದಾಜು ಪರಿಶೀಲನಾ ಸಮಿತಿ, ಕೃ.ಭಾ.ಜ.ನಿ. ಬೆಂಗಳೂರು | ಸದಸ್ಯರು |
| 3 | ಶ್ರೀ. ಚೆಲುವರಾಜು, ನಿವೃತ್ತ ಮುಖ್ಯ ಇಂಜಿನೀಯರ್ ಹಾಗೂ ಸದಸ್ಯರು ಅಂದಾಜು ಪರಿಶೀಲನಾ ಸಮಿತಿ, ವಿ.ಜ.ನಿ.ನಿ., ಬೆಂಗಳೂರು | ಸದಸ್ಯರು |

2. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತರವರು ಸದರಿ ಸಮಿತಿಗೆ ಅಗತ್ಯ ಮಾಹಿತಿ / ವಿವರಗಳನ್ನು ಆದ್ಯತೆಯ ಮೇರೆಗೆ ಒದಗಿಸುವುದು.

3. ಸಮಿತಿಯ ಕಾರ್ಯ ನಿರ್ವಹಣೆ ಸಂಬಂಧ ಅಗತ್ಯವಿರುವ ಸೌಕರ್ಯ ಮತ್ತು ಸಂಭಾವನೆ ಹಾಗೂ ಇತರೆ ವೆಚ್ಚಗಳನ್ನು ನಿಯಮಾನುಸಾರ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ವತಿಯಿಂದ ಭರಿಸುವುದು ಹಾಗೂ ಸಮಿತಿಯ ವರದಿಯನ್ನು 3 ತಿಂಗಳ ಅವಧಿಯೊಳಗಾಗಿ ಸರ್ಕಾರಕ್ಕೆ ಸಲ್ಲಿಸಲು ವ್ಯವಸ್ಥಾಪಕ ನಿರ್ದೇಶಕರು ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

10/6/2022
(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5),
ಜಲ ಸಂಪನ್ಮೂಲ ಇಲಾಖೆ.

**ಇವರಿಗೆ:-**

1. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜ.ಸಂ.ಇಲಾಖೆ
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ
4. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು. ಇವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
5. ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ (ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರವರ ಮೂಲಕ)
5. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ.
6. ಸರ್ಕಾರದ ಉಪ ಕಾರ್ಯದರ್ಶಿ (ಕೃಭಾಜನಿ), ಜಲ ಸಂಪನ್ಮೂಲ -ಇಲಾಖೆ.
7. ಶಾಖಾ ರಕ್ಷಾ ಕಡತ/ ಹೆಚ್ಚಿನ ಪ್ರತಿ.